# ಬೃಹಚ್ಚರಣ


**ಸಂಪಾದಕ ಸಮಿತಿ**

| | |
|---|---|
| ಎಸ್. ಸೋಮಸುಂದರ | ಪ್ರಧಾನ ಸಂಪಾದಕ |
| ವಿ. ಎಸ್. ಮಣಿ | ಕಾರ್ಯದರ್ಶಿ |
| ಬಿ.ಎಸ್. ಸೂರ್ಯನಾರಾಯಣ | ಸದಸ್ಯರು |
| ಎನ್. ಚಂದ್ರಮೌಳಿ | ಸದಸ್ಯರು |
| ಅಚಲ ರಮೇಶ್ | ಸದಸ್ಯರು |
| ಕೆ.ಸಿ. ನಟರಾಜನ್ | ಸಂಚಾಲಕರು |
| ಕೆ.ಎಸ್. ಮಧುಸೂದನ | ಗೌರವ ಸಂಪಾದಕರು |



ಸಂಪುಟ : 2 ಸಂಚಿಕೆ : 3 ತ್ರೈಮಾಸಿಕ ವಾರ್ತಾಪತ್ರ ಖಾಸಗಿ ಪ್ರಸಾರಕ್ಕಾಗಿ ಜುಲೈ–ಸೆಪ್ಟಂಬರ್ 2012




## ಅರ್ಪಣೆ

ಬೃಹಚ್ಚರಣ


ಈ ಸಂಚಿಕೆಯನ್ನು ಬೃಹಚ್ಚರಣ ಸಂಘದ ಅಧ್ಯಕ್ಷರಾಗಿದ್ದ ಶ್ರೀಕಂಠೇಶ್ವರ ಐಯ್ಯರ್ ಅವರಿಗೆ ಶ್ರದ್ಧೆ ಹಾಗೂ ಗೌರವಗಳಿಂದ ಅರ್ಪಿಸಿದೆ. *(ಪರಿಚಯ 2ನೇ ಪುಟ)*

## ಸಂಪಾದಕೀಯ

'ಬೃಹಚ್ಚರಣ' ವಾರ್ತಾಪತ್ರಕ್ಕೆ ಒಂದು ವರ್ಷ ತುಂಬಿತು. ಇದು ಎಲ್ಲರಿಗೂ ಸಂತಸವನ್ನು ತಂದಿದೆ. 1–5–12ರಂದು ನಡೆದ ನಮ್ಮ ಸಮುದಾಯದ ಸಭೆಯಲ್ಲಿ ನೇರವಾಗಿ, ದೂರವಾಣಿಯಲ್ಲಿ ಹಾಗೂ ಪತ್ರಗಳ ಮೂಲಕ ನಮ್ಮವರಾದ ನೀವೆಲ್ಲರೂ 'ಬೃಹಚ್ಚರಣ' ಪತ್ರಿಕೆಯನ್ನು ಕುರಿತು ಮುಕ್ತ ಕಂಠದಿಂದ ಪ್ರಶಂಸೆಯನ್ನು ವ್ಯಕ್ತಪಡಿಸಿರುತ್ತೀರಿ. ಇದಕ್ಕಾಗಿ ಸಂಪಾದಕನ ಹೃದಯಪೂರ್ವಕ ಕೃತಜ್ಞತೆಗಳು ಪತ್ರಿಕೆಯನ್ನು ಇನ್ನೂ ಉನ್ನತ ಗುಣಮಟ್ಟವಿರುವಂತೆ ಹೊರತರಲು ಪ್ರಾಮಾಣಿಕವಾಗಿ ಪ್ರಯತ್ನ ಪಡುತ್ತೇವೆ. ಪತ್ರಿಕೆ ನಿಮ್ಮದು ದಯವಿಟ್ಟು ರಚನಾತ್ಮಕ ಸಲಹೆಗಳನ್ನೂ ಕಾರ್ಯಸಾಧ್ಯವಾದ ಸೂಚನೆಗಳನ್ನೂ ಪತಮುಖೇನ ತಿಳಿಸಿ. ಎಂದುರೋ ಮಹಾನುಭಾವುಲು, ... ಯುಲು.

...ರಿ–ಗಣೇಶ ಹಬ್ಬದ ಶುಭಾಷಯಗಳು.

■ ಸಂ



...ೕ ಕುಕ್ಕೆ ಸುಬ್ರಮಣ್ಯ ಮಠಾಧೀಶ ...ೕ ಶ್ರೀ ಶ್ರೀ ಅವರು 'ಬೃಹಚ್ಚರಣ' ...ಂಚಿಕೆಯನ್ನು ಅವಲೋಕಿಸುತ್ತಿರುವುದು.

## ಅಧ್ಯಕ್ಷರ ನುಡಿ

(5)

*ಆತ್ಮೀಯರೆ,*

ತಮ್ಮೆಲ್ಲರ ಸಹಕಾರ, ಸಲಹೆಯಂತೆ ಬೃಹಚ್ಚರಣ ಸಂಘದ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದೇವೆ. ದಿನಾಂಕ : 1–5–2012ರಂದು ಸರ್ವಸದಸ್ಯರ ಸಭೆಯು ನಡೆದಿದ್ದು ತಮಗೆ ತಿಳಿದ ವಿಷಯ.

ನಮ್ಮ ವಾಗ್ದಾನದಂತೆ ಒಂದು ವರ್ಷದಲ್ಲಿ 'ಬೃಹಚ್ಚರಣ' ಪತ್ರಿಕೆಯು 4 ತ್ರೈಮಾಸಿಕ ಸಂಚಿಕೆ ಬಿಡುಗಡೆಯಾಗಿದೆ. ವೆಚ್ಚಕ್ಕೆ ಪ್ರಾಮುಖ್ಯತೆ ಕೊಡದೆ, ಉತ್ತಮ ಗುಣಮಟ್ಟದ ಸಂಚಿಕೆಗಳು ತಮಗೆ ತಲುಪಿರುವ ಬಗ್ಗೆ ತಮ್ಮ ಮೆಚ್ಚುಗೆಯು ಇನ್ನೂ ಉತ್ತಮವಾಗಿ ಸಂಚಿಕೆಯನ್ನು ಜನಪ್ರಿಯವಾಗುವಂತೆ ತರಲು ಪ್ರೋತ್ಸಾಹಿಸಿದೆ. ತಮಗೆಲ್ಲಾ ವಂದನೆಗಳು. ತಮ್ಮ ಸಲಹೆಯಂತೆ ಸಂಚಿಕೆಗೆ ಜಾಹೀರಾತು ಪಡೆಯುವ ಮೂಲಕ ದೇಣಿಗೆ ಸಂಗ್ರಹಿಸಿ, ಪತ್ರಿಕೆಗೆ ತಗಲುವ ವೆಚ್ಚವನ್ನು ಭರಿಸುವ ಸಹಕಾರವನ್ನು ಕಾರ್ಯಕಾರಿ ಸಮಿತಿಯು ತಮ್ಮಿಂದ ನಿರೀಕ್ಷಿಸುತ್ತದೆ.

ಈ ಹಿಂದೆ ವಾರ್ಷಿಕ ಸದಸ್ಯತ್ವವನ್ನು ಕೇವಲ 200.00 ರೂ.ಗಳಿಗೆ ನವೀಕರಿಸಲು ಕಾರ್ಯಕಾರಿ ಸಮಿತಿಯು ನಿರ್ಧರಿಸಿತ್ತು. ಆದರೆ ಕೆಲವು ಹಿರಿಯ ಸದಸ್ಯರು, ಒಂದು ಬಾರಿ ಸದಸ್ಯತ್ವ ಪಡೆದರೆ ಸಾಕು ಮುಂದೆ ಅದನ್ನು ನವೀಕರಿಸಲು ವಾರ್ಷಿಕ ಚಂದಾವನ್ನು ಸಂಘವು ಸ್ವೀಕರಿಸಬಾರದೆಂದು ಸರ್ವಸದಸ್ಯರ ಸಭೆಯಲ್ಲಿ ವಾದಿಸಿ, ಸಂಘದ ಏಳಿಗೆಗೆ ದೇಣಿಗೆ ಹಾಗೂ ಜಾಹೀರಾತುಗಳಿಂದ ಹಣ ಪಡೆಯಬಹುದೆಂದು ಸೂಚಿಸಿದ್ದ ಸಂದರ್ಭದಲ್ಲಿ ಸದಸ್ಯ ಶ್ರೀ ಸುಂದರ್‌ರವರು ಸಭೆಯಲ್ಲಿಯೇ, ಒಂದು ಸಾವಿರ ರೂ.ಗಳನ್ನು 'ಬೃಹಚ್ಚರಣ' ಸಂಚಿಕೆಗೆ ದೇಣಿಗೆ ಕೊಡುತ್ತೇನೆಂದು ವಾಗ್ದಾನ ಮಾಡಿದರು. ಸಂಘದ ಕಾರ್ಯಚಟುವಟಿಕೆಗಳಿಗಾಗಿ ವಾರ್ಷಿಕ ಚಂದಾದಿಂದ ಬರುವ ಹಣವನ್ನು ನಾವು ಹಮ್ಮಿಕೊಳ್ಳುವ ಕಾರ್ಯಕ್ರಮಗಳಿಗೆ ಮೀಸಲಿಡಬೇಕೆಂಬ ಉದ್ದೇಶವಿತ್ತು. ಚಂದಾ ಕೊಡುವ ನೆಪದಲ್ಲಿ ಸದಸ್ಯರ ಪರಸ್ಪರ ಸ್ಪಂದನೆ, ವಿಚಾರ ವಿನಿಮಯ ನಡೆಯುತ್ತಿತ್ತು. ಚಂದಾ ಬಗ್ಗೆ ಸದಸ್ಯರಲ್ಲೇ ಗೊಂದಲ ಏರ್ಪಡುವುದು ಸರಿಯಲ್ಲವೆಂದು ನನ್ನ ಭಾವನೆ. ಚಂದಾ ಬದಲಾಗಿ ಉದಾರವಾಗಿ ದಾನ ಮಾಡಿ ಎಂದು ನನ್ನ ಕೋರಿಕೆ.

ಸರ್ವಸದಸ್ಯರ ಸಭೆಯಲ್ಲಿ ತೀರ್ಮಾನಿಸಿದಂತೆ ಸಂಘವನ್ನು ಸರ್ಕಾರದಲ್ಲಿ ನೋಂದಾಯಿಸಲು ಕ್ರಮ ಕೈಗೊಂಡಿದ್ದೇವೆ. ಕೆಲವು ತಾಂತ್ರಿಕ ಅಡಚಣೆಗಳಿಂದ ಈ ಹಿಂದೆ ನೋಂದಾಯಿಸಿದ್ದನ್ನು ಮುಂದುವರೆಸಲಾಗಿಲ್ಲ. ಸದಸ್ಯರು ಸೂಚಿಸಿರುವಂತೆ ತಿದ್ದುಪಡಿ ತಂದ ಬೈಲಾವನ್ನು ನೋಂದಾಯಿಸಲಾಗುವುದು. ಇದರಿಂದ ಸಂಘಕ್ಕೆ ಹೆಚ್ಚಿನ ಆರ್ಥಿಕ ಸಹಾಯ ಒದಗುವುದೆಂಬ ಕೆಲವರ ಅಭಿಪ್ರಾಯಕ್ಕೆ ಮನ್ನಣೆ ನೀಡಿದೆ.

ಸಂಘಕ್ಕೆ ಒಂದು ಸಾವಿರ ರೂ.ಗಳನ್ನು ಕೊಟ್ಟು ಸದಸ್ಯರಾಗಿರುವ ಕೆಲವು ಮಹನೀಯರು ಮತ್ತೆ ನಾಲ್ಕು ಸಾವಿರಗಳನ್ನು ಕೊಟ್ಟು, ಪೋಷಕರಾಗಿರುವುದಕ್ಕೆ ಕೃತಜ್ಞತೆ. ಇತರ ಸದಸ್ಯರೂ ಪೋಷಕರಾಗಿರೆಂದು ವಿನಂತಿಸುತ್ತೇನೆ. ನಮ್ಮ ಪಂಗಡದ ಸಂಬಂಧಿಗಳನ್ನೂ ಕೂಡ ಸದಸ್ಯರಾಗಿಸುವಂತೆ ತಮ್ಮನ್ನು ಕೋರುತ್ತೇನೆ.

ಸಂಘವು ತಮ್ಮ ಸಲಹೆಯಂತೆ 'ಸಂತರ್ಪಣಾ ನಿಧಿ'ಯೊಂದನ್ನು ಸ್ಥಾಪಿಸಲು ಉದ್ದೇಶಿಸಿದ್ದು, ದೇಣಿಗೆ ನೀಡುವ ಮೂಲಕ ತಮ್ಮ ಸಹಕಾರ, ಸಹಾಯಹಸ್ತ, ನೀಡುವಿರೆಂದು ಆಶಿಸುತ್ತೇನೆ. ಕಳೆದ 2011ರಂತೆಯೇ, ಈ ಬಾರಿಯೂ 75 ವಸಂತಗಳನ್ನು ಕಂಡಿರುವ ಹಿರಿಯರಿಗೆ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನವೆಂಬರ್ ಒಂದರಂದು ಸನ್ಮಾನಿಸಲು ತೀರ್ಮಾನಿಸಿದೆ. ದಾನಿಗಳ ಸಹಕಾರ ಅಗತ್ಯ.

ಸರ್ವಸದಸ್ಯರ ಸಭೆಯಲ್ಲಿ ಮೂರು ವರ್ಷಗಳಿಗೆ, ಒಮ್ಮತದಿಂದ ತಾವು ಆಯ್ಕೆ ಮಾಡಿದ, ಸಂಘದ ಕಾರ್ಯಕಾರಿ ಸಮಿತಿಯು, ಸಂಘದ ಒಳಿತಿಗಾಗಿ ಕೆಲಸ ನಿರ್ವಹಿಸುತ್ತದೆ ಎಂದು ತಿಳಿಸುತ್ತ, ಆಯ್ಕೆ ಮಾಡಿದ ಸರ್ವಸದಸ್ಯರಿಗೂ ಕಾರ್ಯಕಾರಿ ಸಮಿತಿಯ ಪರವಾಗಿ ವಂದನೆ ಸಲ್ಲಿಸುತ್ತೇನೆ.

■ ಎಸ್. ಸೋಮಸುಂದರ


05.9.12 POSTAGE INDIA 04.00

## ಸಂಘಕ್ಕೆ ಆಯ್ಕೆಯಾದ ಕಾರ್ಯಕಾರಿಣಿ

| | |
|---|---|
| ಅಧ್ಯಕ್ಷರು : | ಎಸ್. ಸೋಮಸುಂದರ, ಬೆಂಗಳೂರು |
| ಉಪಾಧ್ಯಕ್ಷರು : | ಕೆ.ಬಿ. ಮುರಳಿ, ಬೆಂಗಳೂರು |
| | ಕೆ. ಮಂಜುನಾರಾಯಣ್, ಬೆಂಗಳೂರು |
| ಕಾರ್ಯದರ್ಶಿ : | ವಿ.ಎಸ್. ಮಣಿ, ಕಿತ್ತಿಗಾನಹಳ್ಳಿ |
| ಸಹಕಾರ್ಯದರ್ಶಿ : | ವಿ. ಅರುಣ, ಬೆಂಗಳೂರು |
| ಖಜಾಂಚಿ : | ಎಸ್. ಸತ್ಯನಾರಾಯಣ, ಕಿತ್ತಿಗಾನಹಳ್ಳಿ |
| ಲೆಕ್ಕಪರಿಶೋಧಕರು : | ಎಚ್.ಕೆ. ಶಶಿಧರ್, ಬೆಂಗಳೂರು |
| ಸದಸ್ಯರು : | ಆರ್.ಎ. ಈಶ್ವರನ್, ಕಿತ್ತಿಗಾನಹಳ್ಳಿ |
| | ಟಿ.ಎಸ್. ಮಣಿ, ಕಿತ್ತಿಗಾನಹಳ್ಳಿ |
| | ಎಸ್. ಶ್ರೀನಿವಾಸನ್, ಹೊಸಕೋಟೆ |
| | ಆರ್. ಗೋಪಾಲಕೃಷ್ಣ, ಬೆಂಗಳೂರು |
| | ಎಸ್. ಪಿ. ಶ್ರೀನಿವಾಸ, ಸರ್ಜಾಪುರ |
| | ಬಿ. ಶ್ರೀಧರ್, ಬೆಂಗಳೂರು |
| | ಕೆ. ಜಿ. ವೆಂಕಟೇಶ್, ಬೆಂಗಳೂರು |
| | ಸರಸ್ವತಿ ನಟರಾಜನ್, ಬೆಂಗಳೂರು |
| | ಎ.ವಿ. ಮಂಜುನಾಥ, ಬೆಂಗಳೂರು |
| | ಟಿ.ಪಿ. ಸೂರ್ಯನಾರಾಯಣ, ಬೆಂಗಳೂರು |
| | ಗಣೇಶ ಶ್ರೀಧರ್, ಬೆಂಗಳೂರು |
| | ಟಿ.ಎಸ್. ನಾಗೇಶ್, ಬೆಂಗಳೂರು |
| | ಟಿ.ಎಸ್. ರಮೇಶ್, ಬೆಂಗಳೂರು |
| | ಕೆ.ಪಿ. ನಟರಾಜನ್, ಬೆಂಗಳೂರು |
| ಸಲಹೆಗಾರರು : | ಕೆ.ಎಸ್. ಮಧುಸೂದನ, ಬೆಂಗಳೂರು |

## ನಮ್ಮನ್ನಗಲಿದ ನಮ್ಮವರು

ಶ್ರೀಮತಿ ಬಾನು (ಶ್ರೀ ರಮಣಿಯವರ ಧರ್ಮಪತ್ನಿ)
ಶ್ರೀಮತಿ ಸುಮಿತ್ರ (ಶ್ರೀ ಛಾಯಾಪತಿಯವರ ಧರ್ಮಪತ್ನಿ)
ಶ್ರೀ ಡಿ. ಈಶ್ವರನ್ (ಕಾಚರಕನಹಳ್ಳಿ)
ಡಾ. ಎಸ್.ವಿ. ವೆಂಕಟಕೃಷ್ಣ (ಶ್ರೀಧರ್ ಬಿ.ರವರ ದೊಡ್ಡಪ್ಪ)
ಶ್ರೀ ಬಿ.ಎಸ್. ಈಶ್ವರ ಮೂರ್ತಿ
ಶ್ರೀ ಅನಂತರಾಮನ್
ಶ್ರೀ ಎಂ.ಡಿ. ಈಶ್ವರನ್
ಶ್ರೀಮತಿ ಸರೋಜಮ್ಮ (ಶ್ರೀ ದಿ॥ ಮುನೀಶ್ವರಯ್ಯಯವರ ಧರ್ಮಪತ್ನಿ)

ಶ್ರೀಯುತರುಗಳಿಗೆ ಬೃಹಚ್ಚರಣ ಸಂಘವು ಪುಷ್ಪಾಂಜಲಿ ಅರ್ಪಿಸುತ್ತಾ ನಮಿಸುತ್ತದೆ.



## ಶ್ರೀ ಬಿ.ಎಸ್.ವಿ.ಗೆ ಅಭಿನಂದನೆ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಚುನಾವಣೆಯಲ್ಲಿ ತಾವು ಮತ್ತು ತಮ್ಮ ತಂಡ ಅಭೂತಪೂರ್ವ ಜಯ ಗಳಿಸಿದ್ದಲ್ಲದೆ, ತಮ್ಮನ್ನು ಸಭಾ ಅಧ್ಯಕ್ಷರಾಗಿ ಆರಿಸಿರುವುದಕ್ಕೆ ನಮ್ಮ "ಬೃಹಚ್ಚರಣ" ಸಂಘವು ತುಂಬು ಹೃದಯದಿಂದ ಅಭಿನಂದಿಸುತ್ತದೆ.

ಬ್ರಾಹ್ಮಣ ಮಹಾಸಭೆಯ ಅಂಗಸಂಸ್ಥೆಯಾದ 'ಬೃಹಚ್ಚರಣ' ಸಂಘವು, ತಮ್ಮ ಎಲ್ಲಾ ಉತ್ತಮ ಕ್ರಿಯಾಶೀಲ ಕಾರ್ಯಗಳಿಗೆ ಬೆಂಬಲಿಸುತ್ತಾ, ನಮ್ಮ ಸಂಘದ ಚಟುವಟಿಕೆಗಳಿಗೆ ಮಹಾಸಂಘವಾದ ಸಹಕಾರ ಕೋರುತ್ತೇವೆ.

## ಎಸ್. ಶ್ರೀಕಂಠೇಶ್ವರ ಐಯ್ಯರ್‌ರವರ ಪರಿಚಯ

ಪೂಜ್ಯರೂ, ಪ್ರಾತಃಸ್ಮರಣೀಯರೂ ಆದ ಶ್ರೀ ಎಸ್. ಶ್ರೀಕಂಠೇಶ್ವರ ಐಯ್ಯರ್ ಒಬ್ಬ ವ್ಯಕ್ತಿಯಲ್ಲ, ಒಂದು ಸಂಸ್ಥೆಯಾಗಿದ್ದರು ಎಂದರೆ ಅತಿಶಯೋಕ್ತಿಯಲ್ಲ. ಅವರದು ನೂರಕ್ಕೆ ನೂರರಷ್ಟು ಸಂತ ಜೀವನ. ಹೃದಯ ಶ್ರೀಮಂತಿಕೆ ಅವರ ಹುಟ್ಟುಗುಣ. ತಮ್ಮ ಸೌಜನ್ಯ ಸಚ್ಚಾರಿತ್ರ್ಯದಿಂದ ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನ ಗಳಿಸಿದ್ದರು.

1936ರಲ್ಲಿ ನಗರ್ತಪೇಟೆಯಲ್ಲಿ "ವಾಣಿ ವಾಣಿಜ್ಯ ವಿದ್ಯಾ ಶಾಲೆ"ಯನ್ನು ಪ್ರಾರಂಭಿಸಿದರು. ಇದು ಬೆಂಗಳೂರಿನಲ್ಲಿ ಪ್ರಾರಂಭವಾದ ಮೊದಲ ವಾಣಿಜ್ಯ ಸಂಸ್ಥೆಗಳಲ್ಲಿ ಒಂದು. ಎರಡೇ ಬೆರಳಚ್ಚು ಯಂತ್ರದಿಂದ ಶುರುವಾದ ಈ ಸಂಸ್ಥೆ ದಿನದಿನೇ ಅಭಿವೃದ್ಧಿ ಹೊಂದಿ ನಂತರ 1956ರಲ್ಲಿ ಬೆಂಗಳೂರಿನ ಜರ್ನಲಿಸ್ಟ್ ಕಾಲೋನಿಯಲ್ಲಿ ಇದರ ಶಾಲೆಯನ್ನು ತನ್ನದೇ ಆದ ಸ್ವಂತ ಕಟ್ಟಡದಲ್ಲಿ ಪ್ರಾರಂಭಿಸಿತು. ಈ ಕಟ್ಟಡಕ್ಕೆ ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಕೆ.ಸಿ. ರೆಡ್ಡಿ 1950ರಲ್ಲಿ ಶಂಕುಸ್ಥಾಪನೆ ನೆರವೇರಿಸಿದರು. 1956ರಲ್ಲಿ ಆಗಿನ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಕೆಂಗಲ್ ಹನುಮಂತಯ್ಯನವರು ಕಟ್ಟಡದ ಉದ್ಘಾಟನೆಯನ್ನು ಮಾಡಿದರು. 1961ರಲ್ಲಿ ಶೃಂಗೇರಿ ಜಗದ್ಗುರುಗಳಾದ ಶ್ರೀ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಸ್ವಾಮಿಗಳು ಈ ಶಾಲೆಗೆ ಆಗಮಿಸಿದ್ದರು. 1961ರಲ್ಲಿ ಮೈಸೂರು ಮಹಾರಾಜರು ಮತ್ತು ಆಗಿನ ರಾಜ್ಯಪಾಲರೂ ಆಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರು ಮತ್ತು ಆಗಿನ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಎಸ್.ಆರ್. ಕಂಠಿಯವರ ಅಧ್ಯಕ್ಷತೆಯಲ್ಲಿ ಶಾಲೆಯ ಬೆಳ್ಳಿಹಬ್ಬವನ್ನು ಉದ್ಘಾಟಿಸಿ "ಚಿನ್ನದ ಪದಕವನ್ನು" ದಯಪಾಲಿಸಿದರು. 1956ರಲ್ಲಿ ಇಂಗ್ಲಿಷ್ ಶೀಘ್ರಲಿಪಿಯನ್ನು ಕಂಡುಹಿಡಿದ Sri Isac Pitmen ಅವರ ಮೊಮ್ಮಕ್ಕಳಾದ Sri Peter Isac Pitmen ಅವರು ಈ ಶಾಲೆಗೆ ಭೇಟಿ ನೀಡಿ ಪ್ರೋತ್ಸಾಹಿಸಿದ್ದಾರೆ. ಆಗಿನ ರಾಜ್ಯಪಾಲರಾಗಿದ್ದ ಶ್ರೀ ವಿ.ವಿ. ಗಿರಿ, ಮುಖ್ಯಮಂತ್ರಿಗಳಾಗಿದ್ದ ಬಿ.ಡಿ. ಜತ್ತಿ, ಕಡಿದಾಳ್ ಮಂಜಪ್ಪ ಇನ್ನೂ ಇತರರು ಆಗಮಿಸಿದ್ದರು. ಇವರು 50 ವರ್ಷಗಳ ಕಾಲ ಶಾಲೆಯನ್ನು ಯಶಸ್ವಿಯಾಗಿ ನಡೆಸಿ ವಿದ್ಯಾರ್ಥಿಗಳನ್ನು ಇಂಗ್ಲಿಷ್, ಕನ್ನಡ ಟೈಪಿಂಗ್ ಮತ್ತು ಶಾರ್ಟ್‌ಹ್ಯಾಂಡ್‌ನಲ್ಲಿ ಮತ್ತು Commerce & Accountency ಯಲ್ಲಿ ಪ್ರತಿಭಾನ್ವಿತರನ್ನಾಗಿ ಮಾಡಿದ್ದಾರೆ. ಇವರಿಗೆ "ವಾಣಿಜ್ಯ ವಿದ್ಯಾಸೇವಾ ನಿರತ" ಎಂಬ ಬಿರುದನ್ನು ಅರ್ಪಿಸಲಾಗಿದೆ. ಇದಲ್ಲದೆ ಇವರು ಶ್ರೀ ಸೀತಾರಾಮ ಮಂದಿರ, ಶ್ರೀ ಸೀತಾರಾಮ ಕೋ-ಆಪರೇಟಿವ್ ಸೊಸೈಟಿ, ಘಾಟಿ ಸುಬ್ರಮಣ್ಯ ಕ್ಷೇತ್ರದ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಮಂಡಲಿ, ಕಿತ್ತಿಗಾನಹಳ್ಳಿ ಆನೇಕಲ್ ತಾಲೂಕು ಇದರ ಅಧ್ಯಕ್ಷರಾಗೂ ಇದ್ದರು.

ಇವರದು ಸುಖಿ ಕುಟುಂಬ. ಇವರು ತಮ್ಮ 8 ಜನ ಮಕ್ಕಳು, ಅಳಿಯಂದಿರು ಮೊಮ್ಮಕ್ಕಳ ಜೊತೆ ತುಂಬು ಜೀವನ ನಡೆಸಿ ತಮ್ಮ 86ನೇ ವಯಸ್ಸಿನಲ್ಲಿ 20-8-2001ರಲ್ಲಿ ದೈವಾಧೀನರಾದರು.

## ಮನವಿ

ಸಂಘವು ಹಮ್ಮಿಕೊಳ್ಳುತ್ತಿರುವ ತನ್ನ ಅನೇಕ ಸತ್‌ಕಾರ್ಯಕ್ರಮಗಳಿಗೆ ಹಾಗೂ **'ಅನ್ನಸಂತರ್ಪಣಾ ನಿಧಿ'**ಗೆ ತಮ್ಮ ಉದಾರ ಮನಸ್ಸಿನಿಂದ ನೀಡುವ ಧನಸಹಾಯವನ್ನು ಸ್ವೀಕರಿಸುತ್ತೇವೆ.

ರೂ. 1,000/- ಮೇಲ್ಪಟ್ಟು ನೀಡುವ ದಾನಿಗಳ ಹೆಸರನ್ನು **'ಬೃಹಚ್ಚರಣ'** ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.



# ಮದುವೆಯ ಶುಭಾಶಯಗಳು

ಸಂಘದ ಸದಸ್ಯರಾದ **ಶ್ರೀಮತಿ ಮತ್ತು ಶ್ರೀ ಎಸ್.ವಿ. ಜಗದೀಶ್**ರವರ ಪುತ್ರಿ **ಚಿ॥ ಸೌ॥ ಧನಲಕ್ಷ್ಮಿ**ಯ ವಿವಾಹವು **ಶ್ರೀಮತಿ ಮತ್ತು ಶ್ರೀ ಎಂ. ಕೃಷ್ಣಮೂರ್ತಿ**ಯವರ ಪುತ್ರ **ಪ್ರದೀಪ್‌ರಾಜ್**ರೊಂದಿಗೆ ಇದೇ ದಿನಾಂಕ 9–8–2012ರಂದು ವಿವಾಹ ಸಮಾರಂಭ ನೆರವೇರಿತು. ನೂತನ ದಂಪತಿಗಳಿಗೆ 'ಬೃಹಚ್ಚರಣ' ಸಂಘವು ಶುಭಾಶಯ ಕೋರುತ್ತದೆ.

ಸಂಘದ ಸದಸ್ಯರಾದ **ಶ್ರೀಮತಿ ಶಾಂತಲಕ್ಷ್ಮಿ ಮತ್ತು ಶ್ರೀ ಜಿ. ಸುಬ್ರಮಣಿಯ**ವರು ತಮ್ಮ ಪುತ್ರಿ **ಚಿ॥ ಸೌ॥ ಭೂಮಿಕಾ (ಸುಷ್ಮಾ)**ರವರನ್ನು **ಶ್ರೀಮತಿ ಚಂದ್ರಿಕಾ, ಶ್ರೀ ವೀರಪ್ಪ**ನವರ ಪುತ್ರ **ಚಿ॥ ವಿ. ಹರಿಪ್ರಸಾದ್**ರೊಂದಿಗೆ ತಾ॥ 25–7–12ರಂದು ವಿವಾಹ ಸಮಾರಂಭ ನೆರವೇರಿಸಿದರು. 'ಬೃಹಚ್ಚರಣ' ಸಂಘವು ನೂತನ ದಂಪತಿಗಳಿಗೆ ಶುಭಹಾರೈಸುತ್ತದೆ.

ಸಂಘದ ಹಿತೈಷಿಗಳಾದ **ಶ್ರೀಮತಿ ಲಕ್ಷ್ಮೀದೇವಿ ರಾಮಚಂದ್ರ**ರವರ ಪುತ್ರಿ **ಶ್ರೀಮತಿ ಶ್ರೀ ಪ್ರಕಾಶ್**ರವರ ಪುತ್ರಿ **ಚಿ॥ ಸೌ॥ ಸ್ವಾತಿ**ಯನ್ನು **ಶ್ರೀಮತಿ ವಿಜಯ ಶ್ರೀ ಬಿ.ಎನ್. ಕೃಷ್ಣಮೂರ್ತಿ**ಯವರ ಪುತ್ರ **ಚಿ॥ ರಾಕೇಶ್**ರೊಂದಿಗೆ ತಾ॥ 25–7–2012ರಂದು ವಿವಾಹ ನೆರವೇರಿಸಿದರು. ಬೃಹಚ್ಚರಣ ಸಂಘವು ನೂತನ ವಧುವರರಿಗೆ ಶುಭಕೋರುತ್ತದೆ.

## ವಟುಗಳಿಗೆ ಶುಭಹಾರೈಕೆ

**ಶ್ರೀಮತಿ ರಾಧಿಕ ಹಾಗೂ ಶ್ರೀ ತ್ಯಾಗರಾಜ್**ರವರು ಇದೇ 10–5–2012ರಂದು ತಮ್ಮ ಪುತ್ರ **ಚಿ॥ ಸುಮುಖ**ನಿಗೆ ಬ್ರಹ್ಮೋಪದೇಶ ನೆರವೇರಿಸಿದ್ದು 'ಬೃಹಚ್ಚರಣ' ಸಂಘವು ವಟುವಿಗೆ ಶುಭಹಾರೈಸುತ್ತದೆ.

**ಶ್ರೀಮತಿ ರೂಪ ಮತ್ತು ಶ್ರೀ ಟಿ.ಜಿ. ಸುರೇಶ್**ರವರು ತಮ್ಮ ಪುತ್ರ **ಚಿ॥ ಪ್ರಣವ್**ಗೆ ದಿನಾಂಕ: 23–05–2012ರಂದು ಉಪನಯನವನ್ನು ನೆರವೇರಿಸಿದ್ದು "ಬೃಹಚ್ಚರಣ" ಸಂಘವು, ವಟು ಪ್ರಣವ್‌ಗೆ ಶುಭಹಾರೈಸುತ್ತದೆ.

**ಶ್ರೀಮತಿ ರೇಖಾ ಮತ್ತು ಶ್ರೀ ದಿವಾಕರ್**ರವರ ಪುತ್ರ **ಚಿ॥ ದಿವ್ಯೇಂದು**ವಿಗೆ ದಿನಾಂಕ : 30–4–2012ರಂದು ಉಪನಯನ ನೆರವೇರಿದ್ದು ವಟುವಿಗೆ 'ಬೃಹಚ್ಚರಣ' ಸಂಘ ಶುಭಹಾರೈಸುತ್ತೆ.

## ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘ

(ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ) ಅಂಗಸಂಸ್ಥೆ)

### ಹಿರಿಯರಿಗೆ ಸನ್ಮಾನ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭ

ದಿನಾಂಕ : **1–11–2012 ಭಾನುವಾರ**

ಸಂಜೆ: 4.00 ಗಂಟೆಗೆ

ಸ್ಥಳ: **ಬಸವನಗುಡಿ, ಮಲ್ಲಿಕಾರ್ಜುನ ದೇವಸ್ಥಾನದ ಆವರಣ**

**ಬೃಹಚ್ಚರಣ ಬಂಧುಗಳಿಗೆ ಆದರದ ಸ್ವಾಗತ**

ವಿ.ಎಸ್. ಮಣಿ
ಕಾರ್ಯದರ್ಶಿ

ಎಸ್. ಸೋಮಸುಂದರ
ಅಧ್ಯಕ್ಷರು

ಕಾರ್ಯಕಾರಿ ಸಮಿತಿ

**ವಿ.ಸೂ.: 75 ವಸಂತ ತುಂಬಿರುವ ಹಿರಿಯರು ಹಾಗೂ ಶೇ. 80ರ ಮೇಲೆ ಅಂಕ ಪಡೆದಿರುವ ಎಸ್.ಎಸ್.ಎಲ್.ಸಿ.–ಪಿ.ಯು.ಸಿ. ವಿದ್ಯಾರ್ಥಿಗಳು ಹೆಸರನ್ನು ಕೂಡಲೇ ನೋಂದಾಯಿಸಿ.**



ನಮ್ಮ ಹಾಸ್ಯಪ್ರಿಯ

# ರಾಮಕೃಷ್ಣ ಎಚ್.ಪಿ.

"ಬೃಹಚ್ಚರಣ" ಸಮುದಾಯದಲ್ಲಿ ಸಂಗೀತ, ಸಾಹಿತ್ಯ ಕಲಾವಿದರಿಗೆ ಕೊರತೆ ಇಲ್ಲ. ಅಂತೆಯೇ ಹಸಿಗಾಳದ ಪರಮಶಿವಯ್ಯ ರಾಮಕೃಷ್ಣ ಕೂಡ ಒಬ್ಬರು. ವಕೀಲ ವೃತ್ತಿಯಿಂದ ಜೀವನ ಪ್ರಾರಂಭಿಸಿದರೂ, ಬ್ಯಾಂಕಿನ ಉದ್ಯೋಗಿಯಾಗಿ, ಅವರನ್ನು ಬ್ಯಾಂಕಿನ ಪ್ರಚಾರ ನಾಟಕಗಳಲ್ಲಿ, ಸಿಬ್ಬಂದಿ ತರಬೇತಿ ವೀಡಿಯೋ ಚಿತ್ರಗಳಲ್ಲಿ ಅವಕಾಶ ಒದಗಿ, ಬ್ಯಾಂಕಿನಲ್ಲೇ ಉತ್ತಮ ಕಲಾವಿದರಾಗಿ ಹೊರಹೊಮ್ಮಿದರು.

ಇವರು ಅನೇಕ ಟಿ.ವಿ. ಧಾರಾವಾಹಿಗಳಾದ ಆಫೀಸಾಯಣ, ಕಲ್ಯಾಣಮಸ್ತು, ಮುಸ್ಸಂಜೆ, ಕಣ್ಣುಗಳು, ಜೋಕು ಜೋಕೆ, ಮಾಯಾಮೃಗ, ಪ್ರತಿಬಿಂಬ, ಸಂಕ್ರಾಂತಿ, ನಿಕ್ಷೇಪ, ಕಣ್ಣಾಮುಚ್ಚಾಲೆ, ಉಯ್ಯಾಲೆ, ಕಪಿನೀಪತಿ, ಮುಕ್ತ, ಪ್ರೇಯಸಿ ಪ್ರೇಯಸಿ, ಗೀತ ಮಾಧುರಿ ಮತ್ತು ಬದುಕು ಹಾಗೂ ನಮ್ಮಮ್ಮ ಶಾರದೆ ಕಿರುಚಿತ್ರಗಳ ಅಭಿನಯ ಸ್ಮರಣೀಯ. ರಾಷ್ಟ್ರೀಯ ಜಾಲದಲ್ಲಿ ಪ್ರಸಾರವಾದ 'ತೆನಾಲಿರಾಮ' ಮತ್ತು 'ಸಂಸ್ಮರಣ್' ಹಿಂದಿ ಧಾರಾವಾಹಿಗಳಲ್ಲಿ ಅಭಿನಯ. ಶ್ರೀ ದುಂಡೀರಾಜ್‌ರವರ ಚುಟುಕುಗಳಲ್ಲಿ "ಮಿಡಿ ಉಪ್ಪಿನಕಾಯಿ" ಎಂಬ ಹಾಸ್ಯಧ್ವನಿ ಸುರುಳಿಗೆ ಕಂಠದಾನ. 'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾದ 'ನೇಪಥ್ಯ' ಎಂಬ ಫೋಟೋ ಕಾಮಿಕ್ಸ್‌ನಲ್ಲಿ ರೂಪದರ್ಶಿಯಾಗಿ ಅಭಿನಯ.

ಚಲನಚಿತ್ರಗಳಾದ 'ಬಂಗಾರದ ಹೂವು,' 'ಮಣ್ಣಿನ ಮಗ,' 'ಬೋರೇಗೌಡ ಬೆಂಗಳೂರಿಗೆ ಬಂದ,' 'ಮೃತ್ಯು ಪಂಜರದಲ್ಲಿ ಗೂಢಚಾರಿ 555' 'ಗೆಳೆಯ ಗೆಳೆಯ' ಹಾಗೂ 'ಬೇತಾಳ ಗುಡ್ಡ'ದಲ್ಲಿ ಅವರ ಅಭಿನಯ ಗುರುತಿಸುವಂಥದ್ದು.

77 ವಸಂತಗಳನ್ನು ದಾಟಿರುವ ಶ್ರೀ ರಾಮಕೃಷ್ಣರವರು ಇಂದಿಗೂ ವೇದಿಕೆ ಸಿಕ್ಕರೆ ಹಾಡು, ಅಭಿನಯ, ಹಾಸ್ಯ ಪ್ರಹಸನಗಳನ್ನು ಹೇಳುತ್ತಾ ಜನರಂಜಿಸುವವರಲ್ಲಿ ಮೊದಲಿಗರು. ಶ್ರೀಯುತರ ಕುಟುಂಬದ ಸದಸ್ಯರೆಲ್ಲಾ 'ಬೃಹಚ್ಚರಣ' ಸಂಘಕ್ಕೆ ಸದಸ್ಯರಾಗಿರುವುದು ಸಂತೋಷದ ವಿಷಯ. ಶ್ರೀಯುತರ ಧರ್ಮಪತ್ನಿ **ಆನೆಕಲ್ಲು ರಾಜಲಕ್ಷ್ಮಿ ರಾಮಕೃಷ್ಣ ಮತ್ತು ಕುಟುಂಬ**ದವರಿಗೆಲ್ಲಾ ಸಂಘವು ಶುಭ ಹಾರೈಸುತ್ತದೆ.

## ಕಗ್ಗ

*ಇರುವ ಕೆಲಸವ ಮಾಡು ಕಿರಿದೆನದೆ ಮನವಿಟ್ಟು*
*ದೊರೆತುದ ಹಸಾದವೆಂದುಣ್ಣು ಗೊಣಗಿಡದೆ*
*ಧರಿಸು ಲೋಕದ ಭರವ ಪರಮಾರ್ಥವನು ಬಿಡದೆ*
*ಹೊರಡು ಕರೆ ಬರಲ್ ಅಳದೆ–ಮಂಕುತಿಮ್ಮ*

*–ಡಿ.ವಿ.ಜಿ.*

# ಬೃಹಚ್ಚರಣ ಕನ್ನಡ ದ್ವಿಭಾಷಿಕ ನಿಘಂಟು

1. **ಮೂಷಾವಾದನೆ** (ನಾ)– ಗೊಣಗುವುದು, ಏನಾದರೂ ಹಿಡಿಸದಿದ್ದರೆ ತನಗೆ ತಾನೇ ಮಾತನಾಡಿಕೊಳ್ಳುವುದು.

   ಇಂದ್ ಕಳವು ಬಲೆ **ಮೂಷಾವಾದನೆ** ಅಡಿಕಿರಾಂದೆ – ಈ ಮುದುಕ ತುಂಬಾ **ಮೂಷಾವಾದನೆ** ಹೊಡೆಯುತ್ತಾನೆ.

   ಮೂಷಕ (=ಇಲಿ) + ವಾದನೆ < ಸಂಸ್ಕೃತ

2. **ಪಿಂದ್ಲು** (ನಾ) – ಜಡೆ

   ಪಸಾಕು **ಪಿಂದ್ಲು** ಪಿನ್ನೀಚ್ಕೂಳ್ರಪ್ಪೊ ಶಾನೆ ಅಳರಾಳ್ದೆ. ಮಕ್ಕಳು **ಜಡೆ** ಬಾಚಿಸಿಕೊಳ್ಳುವಾಗ ತುಂಬಾ ಅಳುತ್ತಾರೆ.

   ಪಿಂದ್ಲು < ಪಿಂದಲೆ (=ತಲೆಯ ಹಿಂಭಾಗ ಜಡೆ)

   ಇದರ ಜೊತೆಗೆ ಮುಂದಲೆಯನ್ನು ಹೋಲಿಸಿ < ದ್ರಾವಿಡ

   ಮುಂದಲೆ = ಮುನ್+ತಲೆ, ತಲೆಯ ಮುಂಭಾಗ,

   ಮುಂದಲೆ ಸರಿಪಣ್ಣಿಕೊ ಮುಂಭಾಗದ ತಲೆಯನ್ನು (=ತಲೆಗೂದಲನ್ನು) ಸರಿಪಡಿಸಿಕೊ.

3. **ಪಿನ್ನು** (ಕ್ರಿ) (ಹೆಂಗಸರ ತಲೆಯನ್ನು) ಬಾಚು. ಉಂದೆ ಪಣ್ಣಿದ್ದೆ ಪಿಂದ್ಲೆ ಪಿನ್ನು – ನಿನ್ನ ಮಗಳ ಜಡೆಯನ್ನು ಬಾಚು.

   ಗಂಡಸರು ತಲೆಯನ್ನು ಬಾಚಿಕೊಳ್ಳುವ ಕ್ರಿಯೆಗೆ 'ವಾರು' ಎಂದೂ, ಹೆಂಗಸರು ತಲೆಬಾಚಿಕೊಳ್ಳುವ ಕ್ರಿಯೆಗೆ 'ಪಿನ್ನು' ಎಂದೂ ಬೃಹಚ್ಚರಣ ಭಾಷೆಯಲ್ಲಿ ಬಳಕೆಯಲ್ಲಿದೆ.

4. **ವಾರಡಕು** (ಕ್ರಿ) (ಅಡಿಗೆ ಮನೆಯಲ್ಲಿ ತಿನ್ನುವುದಕ್ಕೆ ಏನನ್ನಾದರೂ) ಹುಡುಕು. ಉದಾರಹಣೆಗಾಗಿ ಅವರಿವರು ಬಂದು ಬಿಟ್ಟಾರೆಂದು ಆ ಕಡೆ ಈ ಕಡೆ ನೋಡುತ್ತಾ ಡಬ್ಬಿಗಳಲ್ಲಿ ಏನನ್ನಾದರೂ ತಿಂಡಿಯನ್ನು 'ಹುಡುಕು' 'ವಾರಡಕು' ಶಬ್ದದ ಜೊತೆಗೆ ಇದೇ ಅರ್ಥದಲ್ಲಿ 'ಸಿದುವು' ಎಂಬ ಶಬ್ದವೂ ನಮ್ಮ ಭಾಷೆಯಲ್ಲಿ ಬಳಕೆಯಲ್ಲಿದೆ.

   ಪಚ್ಚಿಗರು ಅಡಕಲೇಲೆ ಓದೋ ವಾರಡಕಾನೆ ಸಿದುವಾನೆ ಅದೆ. ಆಸಾಮಿ ಅಡುಗೆ ಮನೆಯಲ್ಲಿ ಏನನ್ನೋ ಹುಡುಕುತ್ತಿದೆ.

5. **ಗಟವಾಣಿ** (ನಾ) ತುಂಬಾ ಗಟ್ಟಿಯಾಗಿ ಮಾತನಾಡುವ < ದ್ರಾವಿಡ ಹೆಂಗಸು. ಗಟವಾಣಿಯೆ ಕಣ್ಣಾಲು ಪಣ್ಕುಂಡ್ಕ ಹಾಂಬ್ಳ್ಯುಂದೆ ಗತಿ ಗೋವಿಂದ – ಗಟವಾಣಿಯನ್ನು ಮದುವೆಯಾದರೆ ಗಂಡನ ಗತಿ ಗೋವಿಂದ.

   ಘಟ+ವಾಣಿ (ಘಟ(ದಂತಹ)ಸದ್ದು)

6. **ವಾರಾದ್‌ಪುಡಿ** (ನಾ) ಓರೆಗಿತ್ತಿ, ವಾರೆಗಿತ್ತಿ, ಅಣ್ಣ < ತಮ್ಮಂದಿರ ಹೆಂಡತಿಯರು.

   ಎನ್ದೆ ವಾರಾದ್ಪುಡಿ ಬಲೆ ನಲ್ವು – ನನ್ನ ಓರೆಗಿತ್ತಿ ತುಂಬಾ ಒಳ್ಳೆಯವಳು

   ವಾರಾದ್ (=ಓರಿಗೆ, ಜೊತೆಯ) +ಪುಡಿ (<ಪುಡಿಗಿ=ಹುಡುಗಿ?) <ದ್ರಾವಿಡ.

7. **ವೆತ್ಲೆ** (ನಾ) ವೀಳೇದೆಲೆ, ವೀಳಯದ ಎಲೆ ಊಟು ಆನ್‌ಪಿನ್ನೆ **ವೆತ್ಲೆ** ಪಾಕು ಪೋಟ್ಕೊಳೋಣು. ಊಟ ಆದ ಮೇಲೆ **ವೀಳೇದೆಲೆ** ಅಡಿಕೆ ಹಾಕಿಕೊಳ್ಳಬೇಕು. ವೆತ್ಲೆ < ವೀಳೆಯದ ಎಲೆ ಕನ್ನಡ

8. **ಸೆಣಿ** (ಕ್ರಿ) ಇಷ್ಟವಿಲ್ಲದ್ದನ್ನು ಎದುರಿರುವವರಿಗೆ ಗೊತ್ತಾಗುವಂತೆ ಅಸಹನೆಯಿಂದ 'ಮಾತನಾಡು'

   ಅಂದ್ ಪುಳ್ಳೆ ಅವುಂದೆ ಅಮ್ಮನೆ ಒಪ್ಪೋದೂ ಸೆಣಿಗಾನೆ ಇರುಕರಾಂದೆ – ಆ ಹುಡುಗ ಅವನ ಅಮ್ಮನನ್ನು ಯಾವಾಗಲೂ ಸೆಣೆಯುತ್ತಿರುತ್ತಾನೆ.

9. **ಮಹಾ** (ನಾ) – (ಏನು) ಹೆಚ್ಚು, (ಏನು) < ದ್ರಾವಿಡ ದೊಡ್ಡಸ್ತಿಕೆ

   ಇಂದ್ ಪೆರೀಲ್ವಾಳ್ದು ಓದು ಮಹಾ? – ಈ ದೊಡ್ಡವರದು ಏನು ಮಹಾ ದೊಡ್ಡಸ್ತಿಕೆ.

10. **ಉಮಾರುಪಂಡಿ** (ನಾ) ರಂಗೋಲಿ ಪುಡಿ.

    ಒಡಿಂಜೋಂದು ವಾಸ್ಲಿ ಮುನ್ನೆ ಉಮಾರುಪಂಡಿ ಇಡೋಣು.

    ಬೆಳಗ್ಗೆ ಎದ್ದು ಬಾಗಿಲ ಮುದ್ದೆ ರಂಗೋಲಿ ಇಡಬೇಕು.

    <ದ್ರಾವಿಡ

■ ಕೆ.ಎಸ್. ಮಧುಸೂದನ

## ನಮ್ದೆ ವಾತೇಲೆ ಕಗ್ಗ

### ಮಂಚರೋ ರಾಕ್ಷಸರೋ

ಓದು ಭೈರವಲೀಲೆ ಇಂದು ವಿಶ್ವತಿವಿಭ್ರಮಣೆ!
ಓದು ಭೂತತಿ ಪಳ್ಳಿ ಕುಣಿತತಿ ಉನ್ಮಾದು!
ಓದಗ್ನಿ ಗೋಳುಂಗು । ಓದಂತರಾಳುಂಗು!
ಓದು ವಿಸ್ಮಯು ಸೃಷ್ಟಿ! ಮಂಕುತಿಮ್ಮ ॥

ಓದು ಪ್ರಪಂಚು ಇದು । ಓದು ಧಾಳಾಧಾಳಿ!
ಓದದ್ಭುತು ಅಪಾರ ಬಲಯು ನಿರ್ಘಾತು!
ಮಂಚುಂದೆ ಗುರಿ ಓದು? ವೆಲೆ ಓದು? ಕೊನೆ ಓದು!
ಓದು ಅರ್ಥು ಇದೆಲ್ಲಾತ್ತೂ । ಮಂಕುತಿಮ್ಮ ॥

ಮುತ್ಕುಂಡದೆ ಇಂದ್ ಭೂಮಿಯೆ ಅದೊರು ದುರ್ದೈವು
ಮೃತ್ಯು ಕುಣಿಗಾನೆ ಅವನೆ ಕೇಕೆ ಪೋಟ್ಕುಂಡು ॥
ಚುತ್ಕುಂಡದೆ ತಲೆಯೆ ಪ್ರತಿದಿನತಿ ಲೋಕತಿ ಸಮಾಚಾರು!
ಒನ್ನಿಕಿ ಇದಕ್ಕೆಲ್ಲ ಕೊನೆ? । ಮಂಕುತಿಮ್ಮ ॥

ಮಂಚರೊ ರಾಕ್ಷಸರೊ ಭೂಮಿತಾಯಿಯೆ ತಣಿಪೀಕಿತ್ಕು
ರಕ್ತಮೆ ಅಟ್ರಾಳ್ದೆ ಕಣ್ಣೀರು ಚುರಿಪೀಕ್ರಾಪ್ಡಿರಂದ್ಕಾಲೂ
ಓದು ಹಗೆ! ಓದು ಧಗೆ! ಓದು ಪೊಗೆ! ಇಂದ್ ಭೂಮಿ
ಸೌನಿ ಕುಂದೆ ಕಟ್ಟೆಯೋದು । ಮಂಕುತಿಮ್ಮ ॥

ಪುರುಷುಂದೆ ಸ್ವತಂತ್ರತಿದ್ದು ಪರಮಸಿದ್ಧಿ ಓದು
ಭೂಮಿಕಿ ಪ್ರತಿನಿತ್ಯು ರಕ್ತತಿ ಅಭಿಷೇಕಮಾ
ಕೈಕತ್ತಿಯೆ ಪೂವಿಸರು ಅನ್ನುಟು ಇಳತ್ಲಾಡನ್ಕ
ಪರಿಮಳಮೆ ಸೂಸುದ್ಯ । ಮಂಕುತಿಮ್ಮ ॥

■ ಕೆ.ಎಸ್. ಮಧುಸೂದನ

**ಎಡದಿಂದ ಬಲಕ್ಕೆ**


1. ನೀರೂರುವುದು 3, 3. ಸುಮ್ಮನೆ 3, 5. ಹೇಳಿದೆ 2, 6. ಕನಸು 3, 9. ತಡೆ 2, 10. ಗೆಳಿಹೋ 3, 12. ಹುರಿದವರೆ 5, 15. ಸ್ತಂಭ 2, 16. ಹೊದಿಕೆ 3, 17. ಹಣ್ಣಲ್ಲ 2, 18. ಬಾಗಿಲು 2, 19. ಅಂಗಗಳು 3

**ಮೇಲಿನಿಂದ ಕೆಳಕ್ಕೆ**

1. ಕುಟ್ಟುವ ಸಾಧನ 3, 2. ಖಾಲಿ ಮಾಡಿದ್ದು 3, 3. ಹಿಂಭಾಗ 4, 4. ಕೊಯ್ದಬಿದಿರು 2 7. ನಾಲಿಗೆ, ನೆಕ್ಕು 2, 8. ಧಾನ್ಯ 2, 9. ಒಂದು ಹೂ 3

11. ಒಂದು 2, 12. ಎಳಸು 3, 13. ಅರ್ಧ 2, 14. ಒಂದು ಪಾತ್ರೆ 2, 15. ಮಗುವಿನ ಬಟ್ಟೆ 2, 17. ಜಡೆ 3, 18. ಮಾತು 2

**ಪದಬಂಧ-5ರ ಸರಿಯುತ್ತರಗಳನ್ನು ನಿಮ್ಮ ಹೆಸರಿನೊಂದಿಗೆ 25-6-2012ರೊಳಗೆ ಕಳಿಸಿದರೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.**



**ಪದಬಂದು-4ರ ಉತ್ತರ**

| | | | | | | | | | |
|---|---|---|---|---|---|---|---|---|---|
| 1 ಪೋ | ಣ | ವೆ | | 2 ವಾ | ರು | | 3 ಕ | ಳ | ದೆ |
| ರು | | | | ರ | | | ರೂ | | |
| ದ್ದೆ | | 4 ಪ | ಚ್ಚ | ಡಿ | | | 5 ಪ್ಲೇ | 6 ಯ | ರ್ |
| | 7 ಗ | ರಿ | | | | | | ಗಾ | |
| | | ಕಾಂ | | 8 ವಾ | ಯಿ | | | ಶ್ರ | |
| 9 ಪ | 10 ಕೋ | ಡ | | ಚೊ | | | | ಕ್ಯ | |
| | ಲು | | | 11 ಲ್ಲ | 12 ಕ | ರ | 13 ಕು | | |
| | 14 ಮ | ಳ | 15 ಗು | | ಳ್ಳ | | ಪ್ಪ | | |
| | ಡಿ | | ಉ | | ವು | | ಳಿ | | |
| | | | ಗು | | | | | | |

**1-5-2012ರಂದು ನಡೆದ ಸರ್ವಸದಸ್ಯರ ಸಭೆಯ ಛಾಯಾಚಿತ್ರಗಳು**








## 'ಬೃಹಚ್ಚರಣ' ಭಾಷೆಯ ಸರ್ವನಾಮಗಳ (Pronouns) ವರ್ಗೀಕೃತ ಪಟ್ಟಿ ಕನ್ನಡ ಸಂವಾದೀ ರೂಪಗಳೊಂದಿಗೆ

■ ಶೇಷಾಂಕ

**1. ಸರ್ವನಾಮಗಳ ಪಟ್ಟಿ**

| ಕ್ರಮ ಸಂಖ್ಯೆ | ಬೃಹಚ್ಚರಣ | ಕನ್ನಡರೂಪ |
|---|---|---|
| 1. | ನಾ | ನಾನು |
| 2. | ನಾಂಗು | ನಾವು (ಅಸಮ್ಮುಖ) |
| 3. | ನಾಮು | ನಾವು (ಸಸಮ್ಮುಖ) |
| 4. | ನೀ | ನೀನು |
| 5. | ನೀಂಗು | ನೀವು |
| 6. | ಅವು | ಅವನು |
| 7. | ಅವು | ಅವಳು |
| 8. | ಅವ | ಅವರು |
| 9. | ಇವು | ಇವನು |
| 10. | ಇವು | ಇವಳು |

| ಕ್ರಮ ಸಂಖ್ಯೆ | ಬೃಹಚ್ಚರಣ | ಕನ್ನಡರೂಪ |
|---|---|---|
| 11. | ಇವ | ಇವರು |
| 12. | ಒವು ಆರು | ಯಾವನು |
| 13. | ಒವು ದಾರು | ಯಾವಳು |
| 14. | ಒವ ಯಾರು | ಯಾರು |
| 15. | ಅದು | ಅದು |
| 16. | ಅವಿಗಿ | ಅವು(ಗಳು) |
| 17. | ಇದು | ಇದು |
| 18. | ಇವಿಗಿ | ಇವು(ಗಳು) |
| 19. | ಒದು | ಯಾವುದು |
| 20. | ಒವಿಗಿ3 | ಯಾವುವು |

**2. ಉತ್ತಮ ಪುರುಷ (ನಿರೂಪಕ/ಹೇಳುಗ/ಆಡುಗ) ಪುಲ್ಲಿಂಗ, ಸ್ತ್ರೀಲಿಂಗಗಳ ಏಳು ವಿಭಕ್ತಿ ರೂಪಗಳ ಪಟ್ಟಿ (First Person)**

| | ಏಕವಚನ | | ಬಹುವಚನ (ಎದುರಿಗಿರುವವರನ್ನು ಬಿಟ್ಟು) | | ಬಹುವಚನ (ಎದುರಿಗಿರುವವರನ್ನು ಸೇರಿಸಿ) | |
|---|---|---|---|---|---|---|
| ವಿಭಕ್ತಿ | ಬೃಹಚರಣ | ಕನ್ನಡ | ಬೃಹಚ್ಚರಣ | ಬೃಹಚ್ಚರಣ | ಕನ್ನಡ | |
| ಪ್ರಥಮ | ನಾ | ನಾನು | ನಾಂಗು | ನಾಮು | ನಾವು | |
| ದ್ವಿತೀಯ | ಎನ್ನೆ | ನನ್ನನ್ನು | ಎಂಗೈ | ನಮ್ಮೆ | ನಮ್ಮನ್ನು | |
| ತೃತೀಯ | ಎನ್ದೆ ಅನ್ನು | ನನ್ನಿಂದ | ಎಂಗಳ್ದೆ ಅನ್ನು | ನಮ್ದೆ ಅನ್ನು | ನಮ್ಮಿಂದ | |
| ಚತುರ್ಥಿ | ಎನಕು | ನನಗೆ ಎಂಗಳ್ಕು | ನಮಕು | ನಮಗೆ | | |
| ಪಂಚಮಿ | ಎನ್ದೆ ಅನ್ನು | ನನ್ನಿಂದ | ಎಂಗಳ್ದೆ ಅನ್ನು | ನಮ್ದೆ ಅನ್ನು | ನಮ್ಮಿಂದ | |
| ಷಷ್ಠಿ | ಎನ್ದೆ | ನನ್ನ | ಎಂಗಳ್ದೆ | ನಮ್ದು | ನಮ್ಮ | |
| | ಎನ್ದೇದು | ನನ್ನದು | ಎಂಗಳ್ದು | ನಮ್ದೆ | ನಮ್ಮದು | |
| ಸಪ್ತಮಿ | ಎನ್ದೇಲೆ | ನನ್ನಲ್ಲಿ | ಎಂಗಳ್ದೇಲೆ | ನಮ್ದೇಲೆ | ನಮ್ಮಲ್ಲಿ | |
| | ಎನ್ದೆ ಉಳ್ಳೆ | ನನ್ನೊಳಗೆ | ಎಂಗಳ್ದೆ ಉಳ್ಳೆ | ನಮ್ದೆ ಉಳ್ಳೆ | ನಮ್ಮೊಳಗೆ | |

**3. ಮಧ್ಯಮ ಪುರುಷ (ಶ್ರಾವಕ/ಶ್ರೋತೃ/ಕೇಳುಗ) ಪುಲ್ಲಿಂಗ, ಸ್ತ್ರೀಲಿಂಗಗಳ ಏಳು ವಿಭಕ್ತಿ ರೂಪಗಳ ಪಟ್ಟಿ (Second Person)**

| | ಏಕವಚನ | | ಬಹುವಚನ | |
|---|---|---|---|---|
| | ಬೃಹಚರಣ | ಕನ್ನಡ | ಬೃಹಚ್ಚರಣ | ಕನ್ನಡ |
| ಪ್ರಥಮ ನೀ | ನೀನು | ನೀಂಗು | ನೀವು | |
| ದ್ವಿತೀಯ | ಉನ್ನೆ | ನಿನ್ನನ್ನು | ಉನ್ನಳೆ | ನಿಮ್ಮನ್ನು |
| ತೃತೀಯ | ಉನ್ದೆ ಅನ್ನು | ನಿನ್ನಿಂದ | ಉನ್ನಳ್ದೆ ಅನ್ನು | ನಿಮ್ಮಿಂದ |
| ಚತುರ್ಥಿ | ಉನಕು | ನಿನಗೆ | ಉನ್ನುಳುಕು | ನಿಮಗೆ |
| ಪಂಚಮಿ | ಉನ್ದೆ ಅನ್ನು | ನಿನ್ನಿಂದ | ಉನ್ನಳ್ದೆ ಅನ್ನು | ನಿಮ್ಮಿಂದ |
| ಷಷ್ಠಿ | ಉನ್ದೆ, ಉನ್ದೇದು | ನಿನ್ನ, ನಿನ್ನದು | ಉನ್ನಳ್ದೆ, ಉನ್ನುಳ್ದು | ನಿಮ್ಮ, ನಿಮ್ಮದು |
| ಸಪ್ತಮಿ | ಉನ್ದೇಲೆ | ನಿನ್ನಲ್ಲಿ | ಉನ್ನಳ್ದೇಲೆ | ನಿಮ್ಮಲ್ಲಿ |
| | ಉನ್ದೆಉಳ್ಳೆ | ನಿನ್ನೊಳಗೆ | ಉನ್ನಳ್ದೆ ಉಳ್ಳೆ | ನಿಮ್ಮೊಳಗೆ |

**4. ಪ್ರಥಮ ಪುರುಷ (Third Person) A. ಪ್ರತ್ಯಕ್ಷ ದೂರ ಪ್ರೇಕ್ಷಕ**

| | ಏಕವಚನ | | ಬಹುವಚನ | |
|---|---|---|---|---|
| | ಬೃಹಚರಣ | ಕನ್ನಡ | ಬೃಹಚ್ಚರಣ | ಕನ್ನಡ |
| ಪುಲ್ಲಿಂಗ | ಅವು | ಅವನು | ಅವ | ಅವಳು |
| ಸ್ತ್ರೀಲಿಂಗ | ಅವು | ಅವಳು | ಅವ | ಅವರು |
| ನಪುಂಸಕಲಿಂದ | ಅದು | ಅದು | ಅವಿಗಿ | ಅವು(ಗಳು) |

**B. ಪ್ರತ್ಯಕ್ಷ ಸಮೀಪ ಪ್ರೇಕ್ಷಕ**

| | ಏಕವಚನ | | ಬಹುವಚನ | |
|---|---|---|---|---|
| | ಬೃಹಚರಣ | ಕನ್ನಡ | ಬೃಹಚ್ಚರಣ | ಕನ್ನಡ |
| ಪುಲ್ಲಿಂಗ | ಇವ಼ು | ಇವನು | ಇವ | ಇವರು |
| ಸ್ತ್ರೀಲಿಂಗ | ಇವು | ಇವಳು | ಇವ | ಇವರು |
| ನಪುಂಸಕಲಿಂಗ | ಇದು | ಇದು | ಇವಿಗಿ | ಇವು(ಗಳು) |

**5. ಪ್ರಶ್ನಾರ್ಥಕ ಸರ್ವನಾಮ (Interrogative Pronoun) (ಅದೃಶ್ಯ ಪ್ರೇಕ್ಷಕ)**

| | ಏಕವಚನ | | ಬಹುವಚನ | |
|---|---|---|---|---|
| | ಬೃಹಚರಣ | ಕನ್ನಡ | ಬೃಹಚ್ಚರಣ | ಕನ್ನಡ |
| ಆರು | ಒವ಼ು ಆರು | | ಒವ ಆರು | ಯಾರು |
| ಪುಲ್ಲಿಂಗ | ಒವು ದಾರು | | ದಾರು | |
| ಸ್ತ್ರೀಲಿಂಗ | ಒವು ಯಾರು | | ಒವ ಯಾರು | ಯಾರು |
| ನಪುಂಸಕಲಿಂಗ | ಒದು | | ಒವಿಗಿ | ಯಾವುವು |

**6. ಬೃಹಚ್ಚರಣ ಭಾಷೆಯ ಸರ್ವನಾಮಗಳ ಮೂಲಭೂತ ಕೋಷ್ಟಕ**

| ಎಷ್ಟನೆಯದು | ಏನು | ಯಾವುದು | ಯಾರು | ಯಾವ ಆದಿಸ್ವರೆ |
|---|---|---|---|---|
| 1. | ವ್ಯಕ್ತಿ, ವಸ್ತು, ಪ್ರಾಣಿ ವಾಚಕ | ಪ್ರಥಮ ಪುರುಷ | ಪ್ರತ್ಯಕ್ಷ ದೂರ ಪ್ರೇಕ್ಷಕ | ಅ |
| 2. | ವ್ಯಕ್ತಿ, ವಸ್ತು, ಪ್ರಾಣಿ ವಾಚಕ | ಪ್ರಥಮ ಪುರುಷ | ಪ್ರತ್ಯಕ್ಷ ಸಮೀಪ ಪ್ರೇಕ್ಷಕ | ಇ |
| 3. | ವ್ಯಕ್ತಿ ವಾಚಕ | ಮಧ್ಯಮ ಪುರುಷ | ಶ್ರಾವಕ/ಶ್ರೋತೃ/ಕೇಳುಗ | ಉ |
| 4. | ವ್ಯಕ್ತಿ ವಾಚಕ | ಉತ್ತಮ ಪುರುಷ | ನಿರೂಪಕ/ಹೇಳುಗ/ಆಡುಗ | ಎ |
| 5. | ವ್ಯಕ್ತಿ, ವಸ್ತು, ಪ್ರಾಣಿ ವಾಚಕ | ಪ್ರಶ್ನಾರ್ಥಕ ಸರ್ವನಾಮ | ಅದೃಶ್ಯ ಪ್ರೇಕ್ಷಕ | ಒ |

## ಸಂಘಕ್ಕೆ ಹೊಸಬರ ಸೇರ್ಪಡೆ

ಪೋಷಕರು : ಶ್ರೀಯುತ ಆರ್.ಎಸ್. ಗಜಾನನ
ಶ್ರೀಯುತ ರಾಜೀವಲೋಚನ ಶೇಷಪ್ರಸಾದ್

ಸದಸ್ಯರಿಂದ ಪೋಷಕರು : ಶ್ರೀಯುತ ಚಂದ್ರಶೇಖರಯ್ಯ
ಶ್ರೀಯುತ ಸಿ. ಪ್ರಸಾದ್
ಶ್ರೀಯುತ ಸುರೇಶ್ ರಾಜಗೋಪಾಲ್

ಸದಸ್ಯರು : ಶ್ರೀಮತಿ ಬಿ. ಪದ್ಮ, ಶ್ರೀಮತಿ ರಾಧ ನಾಗಭೂಷಣ ಶಾಸ್ತ್ರಿ
ಶ್ರೀಮತಿ ಸುನೀತ ಬಿ.ಜಿ., ಶ್ರೀಮತಿ ಸಂಧ್ಯಾ ವಿ.
ಶ್ರೀ ಗುರುಪ್ರಸಾದ್ ಆರ್.ಸಿ., ಶ್ರೀ ಕೆ.ಎಲ್. ವೇಣುಗೋಪಾಲ್,
ಶ್ರೀ ಕೆ. ನಟರಾಜನ್, ಶ್ರೀ ಎನ್. ಶ್ರೀನಿವಾಸ್
ಶ್ರೀ ಡಿ.ಎಸ್. ವೆಂಕಟರಮಣ ಐಯ್ಯರ್
ಶ್ರೀ ಕೆ. ಸುಬ್ರಮಣಿ, ಶ್ರೀ ಎ.ವಿ. ಜಯರಾಂ

## 1–11–2012 ಸಮಾರಂಭಕ್ಕೆ ಕೊಡುಗೆ ನೀಡಿದ ಬಂಧುಗಳು

ಶ್ರೀಯುತ ಗಣೇಶ್ ಶ್ರೀಧರ್
ಶ್ರೀಯುತ ಎನ್.ಸಿ. ಶ್ರೀನಿವಾಸ್
ಶ್ರೀಯುತ ಎಸ್.ಸಿ. ರಾಘವ ಪ್ರಸಾದ್
ಶ್ರೀಯುತ ಎಸ್. ಶ್ರೀನಿವಾಸನ್
ಶ್ರೀಯುತ ಎಸ್. ಪ್ರದೀಪ್ ಹಾಗೂ ಸ್ನೇಹಿತರು
} ರೂ. 5,000/-

ಶ್ರೀಯುತ ಎಸ್. ಸತ್ಯನಾರಾಯಣ ರೂ. 3,000/-



## ಚಿತ್ರ – ಕಥೆ ಹೇಳುತ್ತೆ

ನನ್ನ ಹಿಂದಿನ,
ಕುಟುಂಬದ ಹಳೇ ಛಾಯಾಚಿತ್ರ
ದೃಷ್ಟಿಸಿ ನೋಡಿದಾಗ, ನಾ ಕೆಲಘಳಿಗೆ
ಗತಿಸಿದ, ದಿನಗಳ ಕಥೆಯ ನೆನಪಿಸುತ್ತಾ
ಮಾತಾಡುತ್ತೆ, ಮನದಾಳದಿ

ಕೆ. ಛಾಯಾಪತಿ ನಟರಾಜ್

## ವಿದೇಶಿ ಪ್ರವಾಸಕ್ಕೆ ಶುಭಾಶಯ

ನಮ್ಮ ಸಂಘದ ಸಲಹೆಗಾರರೂ
'ಬೃಹಚ್ಚರಣ' ತ್ರೈಮಾಸ ಪತ್ರಿಕೆಯ
ಸಂಪಾದಕರಾದ
ಶ್ರೀ ಮಧುಸೂದನರವರು
ವಿದೇಶಿ ಪ್ರವಾಸ ಕೈಗೊಳ್ಳುವ ಈ
ಸಮಯದಲ್ಲಿ ಬೃಹಚ್ಚರಣ ಸಂಘವು
ಪ್ರವಾಸ ಸುಖಕರವಾಗಿರಲೆಂದು
ಶುಭಕೋರುತ್ತದೆ.

## ನಾಗಕ್ಷೇತ್ರದಲ್ಲಿ ಉಪಾಕರ್ಮ

ದಿನಾಂಕ : 2-8-2012ರಂದು ಆನೇಕಲ್ಲು ತಾಲ್ಲೂಕು ಕಿತ್ತಗಾನಹಳ್ಳಿ, 'ನಾಗಕ್ಷೇತ್ರದಲ್ಲಿ' **ಯಜುರ್ವೇದ ಉಪಾಕರ್ಮ ಸಾಮೂಹಿಕ ಧಾರ್ಮಿಕ ಸಮಾರಂಭ** ನೆರವೇರಿತು. ಸುಮಾರು ನೂರಕ್ಕೂ ಮೇಲ್ಪಟ್ಟು ವಿಪ್ರರು ಭಾಗವಹಿಸಿದ್ದು ಚಂದಾಪುರದ ಸಹೃದಯ ವಿಪ್ರವೃಂದ ಕಾರ್ಯಕ್ರಮ ನಡೆಸಿಕೊಟ್ಟಿತು.

## ವರಾನ್ವೇಷಣೆ ಕಾರ್ಯಕ್ರಮ

**"ಸಹೃದಯ"** ವಿಪ್ರ ವೃಂದವು, ಅತ್ತಿಬೆಲೆಯಲ್ಲಿ ದಿನಾಂಕ: 23-09-2012ರಂದು **ನಂಜುಂಡೇಶ್ವರ ದೇವಸ್ಥಾನದಲ್ಲಿ ಬ್ರಾಹ್ಮಣ ವರಾನ್ವೇಷಣಾ** ಕಾರ್ಯಕ್ರಮ ಹಮ್ಮಿಕೊಂಡಿದೆ. ಹೆಚ್ಚಿನ ವಿವರಗಳಿಗೆ ಶ್ರೀ ನಾಗರಾಜ್ 9880204064 ಸಂಪರ್ಕಿಸಿ

## ಹುಟ್ಟು ಹಬ್ಬದ ಶುಭಾಶಯ

ಸಂಘದ ಸದಸ್ಯರಾದ **ಶ್ರೀಮತಿ ವೀಣಾ ಮತ್ತು ಶ್ರೀ ರಾಘವಪ್ರಸಾದ್**ರವರು ದಿನಾಂಕ: 26-08-2012ರಂದು ತಮ್ಮ ಪುತ್ರಿ **ಚಿ॥ ಧಾತ್ರಿಯ** ಮೊದಲನೇ ವರ್ಷದ ಹುಟ್ಟು ಹಬ್ಬ ಆಚರಿಸಿದ್ದು ಮಗು ಧಾತ್ರಿಗೆ 'ಬೃಹಚ್ಚರಣ' ಸಂಘವು ಶುಭ ಆಶೀರ್ವಾದ ಕೋರುತ್ತದೆ.

## ಷಷ್ಠಿಪೂರ್ತಿ ಶಾಂತಿ ಶುಭಾಶಯ

ಅರವತ್ತು ವಸಂತಗಳನ್ನು ಪೂರೈಸಿ, ತುಂಬು ಜೀವನ ನಡೆಸುತ್ತಿರುವ ಸಂಘದ ಸದಸ್ಯರಾದ **ಶ್ರೀ ಕೆ.ಬಿ. ದಾಸ್, ಶ್ರೀ ಕುಪ್ಪಸ್ವಾಮಿ, ಶ್ರೀ ಕೆ.ಸಿ. ಜಯರಾಂ** ಹಾಗೂ **ಶ್ರೀಮತಿ ಸರ್ವಮಂಗಳಾ ಶ್ರೀನಿವಾಸ**ರವರಿಗೆ "ಬೃಹಚ್ಚರಣ" ಸಂಘವು, ಆಯಸ್ಸು, ಆರೋಗ್ಯ ನೆಮ್ಮದಿ ಸದಾ ಇರಲೆಂದು ಶುಭಹಾರೈಸುತ್ತದೆ.

ಕಿತ್ತಗಾನಹಳ್ಳಿ **ಶ್ರೀ ಕೆ.ಎಸ್. ಛಾಯಾಪತಿಯವರಿಗೆ** 70 ವರ್ಷಗಳ ಶಾಂತಿ ನೆರವೇರಿದ್ದು, ಶ್ರೀಯುತರಿಗೆ ಬೃಹಚ್ಚರಣ ಸಂಘವು ಶುಭಕೋರುತ್ತದೆ.

## ಲೇಖನಗಳಿಗೆ ಆಹ್ವಾನ

'ಬೃಹಚ್ಚರಣ' ಪತ್ರಿಕೆಯಲ್ಲಿ ಪ್ರಕಟಣೆಗಾಗಿ ಬೃಹಚ್ಚರಣ ಬಂಧು ಲೇಖಕರು ಲೇಖನಗಳನ್ನು ಕಳುಹಿಸಬಹುದು. ಲೇಖನಗಳು ಆದಷ್ಟೂ ಸಂಕ್ಷಿಪ್ತವಾಗಿರಬೇಕೆಂದು ವಿನಂತಿ.

ವಿಳಾಸ

'ಬೃಹಚ್ಚರಣ'

ನಂ-8, 3ನೇ ಕ್ರಾಸ್, ಅಣ್ಣಯ್ಯಪ್ಪ ಬ್ಲಾಕ್

ಕುಮಾರಪಾರ್ಕ್ ವೆಸ್ಟ್, ಬೆಂಗಳೂರು - 560 020

**9900113298 / 9902145359 / 9845055582**

## ಸುಭಾಷಿತ

ಪ್ರತಿಯೊಂದು ವಸ್ತುವಿಗೆ ಎರಡು ಸಮಯಗಳಲ್ಲಿ ಬಹಳ ಬೆಲೆ ಇರುತ್ತದೆ. ಒಂದು, ಅದು ಸಿಗುವ ಮೊದಲು. ಇನ್ನೊಂದು ಅದು ಕಳೆದ ಮೇಲೆ.

★ ★

ಚಿಂತೆ, ಆತಂಕ, ಪಕ್ಷಿಗಳಿದ್ದಂತೆ. ಅವು ನಮ್ಮ ಸುತ್ತ ಹಾರಾಡುವುದನ್ನು ತಪ್ಪಿಸಲಾಗದು. ಆದರೆ, ಅದು ನಮ್ಮ ಮನದಲ್ಲಿ ಗೂಡು ಕಟ್ಟದಂತೆ ನೋಡಿಕೊಳ್ಳಬೇಕು.

★ ★

ಮಾನವ ಸಂಬಂಧಗಳಲ್ಲಿ ಮೂರು ವಿಷಯಗಳಿವೆ. ಮರ್ಯಾದೆ, ನಂಬಿಕೆ ಮತ್ತು ಪ್ರೀತಿ ಇವುಗಳಲ್ಲಿ ಒಂದು ಕಳೆದರೂ ಮಿಕ್ಕೆರಡೂ ತಮ್ಮಂತೇ ತಾವೇ ಕಳೆದುಹೋಗುತ್ತವೆ.

■ *ಶುಭಗಾಯತ್ರಿ ಎನ್.*

*ಕನಕಪುರ*

### ಸರ್ವಸದಸ್ಯರ ಸಭೆಯ ಸಹಭೋಜನ





Book-Post

To,

M 338 ACHALA RAMESH
626/14, 5TH MAIN ROAD,
4TH BLOCK, RAJAJINAGAR,
BANGALORE 560 010

ಜಾಹೀರಾತು ನೀಡಿ ಸಹಕರಿಸಬೇಕಾಗಿ ಪ್ರಾರ್ಥನೆ

Published by Sri S. Soma Sundara, President, 'BRIHACHARANA SANGHA' No. 8, 3rd Cross, Annaiyyappa Block, Kumarapark West, Bengaluru-560 020.
Printed at Ila Mudrana, No. 36, 40Ft. Road, Raghavanagar, NTY Layout, Bengaluru-560 026.